RNU AIR DHARWAD

NOVEMBER 29, 2025

AKASHAVANI - DHARWAD

PRADESH SAMACHARA (KANNADA) 12.00 P.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

67ನೇ ಆಕಾಶವಾಣಿ ಸಂಗೀತ ಸಮ್ಮೇಳನ, ಇಂದು ಸಂಜೆ 5:45ಕ್ಕೆ, ಧಾರವಾಡದ 'ಸೃಜನಾ' ಅಣ್ಣಾಜಿರಾವ್ ಸಿರೂರ ರಂಗಮಂದಿರದಲ್ಲಿ, ಆಯೋಜಿತವಾಗಿದೆ. ಪ್ರಸಾರ ಭಾರತಿ ಹಾಗೂ ಕೇಂದ್ರ ಸಂಸ್ಕೃತಿ ಸಚಿವಾಲಯದ ಸಹಯೋಗದಲ್ಲಿ, ಆಕಾಶವಾಣಿ ಧಾರವಾಡ ಕೇಂದ್ರ, ಸಂಗೀತ ಸಮ್ಮೇಳನವನ್ನು ಆಯೋಜಿಸಿದೆ. ಸಂಬಾಳ ವಾದ್ಯವನ್ನು, ಬೆಳಗಾವಿ ಜಿಲ್ಲೆ, ಕಲ್ಲೊಳ್ಳಿಯ, ಮಹಾಂತೇಶ ಹೂಗಾರ ಹಾಗೂ ತಂಡ, ಪ್ರಸ್ತುತ ಪಡಿಸಲಿದೆ. ಶಾಸ್ತ್ರೀಯ ವಾದ್ಯ ಸಂಗೀತ ವಿಭಾಗದಲ್ಲಿ, ಪುಣೆಯ ಪಂಡಿತ ಭೀಮಣ್ಣ ಜಾಧವ ಸುಂದರಿ ವಾದ್ಯವನ್ನು, ನುಡಿಸಲಿದ್ದಾರೆ. ಲಘು ಶಾಸ್ತ್ರೀಯ ಸಂಗೀತ ವಿಭಾಗದಲ್ಲಿ, ರಾಯಚೂರು ಜಿಲ್ಲೆ ದೇವದುರ್ಗದ, ವೆಂಕಟೇಶ ಆಲ್ಕೋಡ ಹಾಗೂ ಉತ್ತರಕನ್ನಡ ಜಿಲ್ಲೆ, ಶಿರಸಿಯ ಆರಾಧನಾ ಹೆಗಡೆ, ಗಾಯನ ಕಛೇರಿ ನಡೆಸಿಕೊಡಲಿದ್ದಾರೆ.

<><><>

ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ, 2025ನೇ ಸಾಲಿನ ಗೌರವ ಪ್ರಶಸ್ತಿಗೆ, ನಾಡಿನ ಐವರು ಅನುವಾದಕರು ಆಯ್ಕೆಯಾಗಿದ್ದಾರೆ. ಪ್ರಶಸ್ತಿ ತಲಾ 50 ಸಾವಿರ ರೂಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿದೆ. ಜಾನಪದ ಅನುವಾದ ಕ್ಷೇತ್ರದಲ್ಲಿ ವಿಶಿಷ್ಟ ಕೊಡುಗೆ ನೀಡುತ್ತಿರುವ, ಚಿತ್ರದುರ್ಗದ ಕೆ.ಆರ್. ಸಂಧ್ಯಾ ರೆಡ್ಡಿ, ಪ್ರಶಸ್ತಿಗೆ ಭಾಜನರಾಗಿದ್ದು, ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಕೆ.ಆರ್. ಸಂಧ್ಯಾ ರೆಡ್ಡಿ ಧ್ವನಿ 37 ಸೆಕೆಂದುಗಳು

<><><>

ಶಿವಮೊಗ್ಗ ಜಿಲ್ಲೆಯಾದ್ಯಂತ, ಜನವಸತಿ ಪ್ರದೇಶಗಳಿಗೆ ನುಗ್ಗುವ, ಕಾಡಾನೆಗಳ ನಿಯಂತ್ರಣಕ್ಕಾಗಿ, ಚಿಕ್ಕಮಗಳೂರು ಜಿಲ್ಲೆಯಿಂದ, ಕಾಡಾನೆಗಳ ಸಮರ್ಥ ನಿರ್ವಹಣೆಯ, ವೃತ್ತಿಪರ ತರಬೇತಿ ಪಡೆದ, 30 ಜನರ ತಂಡ ಬಳಸಿಕೊಳ್ಳುವಂತೆ, ಅರಣ್ಯ ಇಲಾಖೆಗೆ ಸೂಚಿಸಿದ್ದಾಗಿ, ಜಿಲ್ಲಾ ಉಸ್ತುವಾರಿ ಸಚಿವ, ಮಧು ಬಂಗಾರಪ್ಪ ತಿಳಿಸಿದ್ದಾರೆ. ಜಿಲ್ಲಾ ಪಂಚಾಯಿತಿ ಸಭಾಂಗಣದಲ್ಲಿ, ಕರ್ನಾಟಕ ಅಭಿವೃದ್ಧಿ ಯೋಜನೆಗಳ, ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ, ಅಧ್ಯಕ್ಷತೆವಹಿಸಿ, ಮಾತನಾಡಿದರು.

<><><>

ನಾಫೆಡ್ ಸಂಸ್ಥೆ, ಮೆಕ್ಕಜೋಳದ, ಪೂರ್ವ ನಿಗದಿತ ಖರೀದಿ ಬೆಲೆ, ಕ್ವಿಂಟಾಲ್‌ಗೆ 2 ಸಾವಿರದ 639 ರೂಪಾಯಿ; ರೈತರಿಗೆ, ಆ ಪೈಕಿ, ಪ್ರತಿ ಕ್ವಿಂಟಾಲ್ ಮೆಕ್ಕಜೋಳಕ್ಕೆ, 2 ಸಾವಿರದ ನಾಲ್ಕುನೂರು ರೂಪಾಯಿ, ಕನಿ ್ಟ ಬೆಂಬಲ ಬೆಲೆ, ನೇರವಾಗಿ ಪಾವತಿಯಾಗಲಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ತಿಳಿಸಿದ್ದಾರೆ. ವಿಧಾನಸೌಧದಲ್ಲಿ, ಕೃಷಿ ಖಾತೆ ಸಚಿವರೊಂದಿಗೆ ಸಭೆ ನಡೆಸಿದ ಅವರು, ರೈತರಿಂದ ಮೆಕ್ಕೆಜೋಳವನ್ನು ನೇರವಾಗಿ ಖರೀದಿಸಲು, ಡಿಸ್ಟಿಲರಿಗಳಿಗೆ ಅವಕಾಶ ಕಲ್ಪಿಸಲಾಗಿದೆ ಎಂದರು.

<><><>

ಧಾರವಾಡ ಜಿಲ್ಲೆಯಾದ್ಯಂತ, 2025–26ನೇ ಸಾಲಿನ, ಹಿಂಗಾರು ಹಂಗಾಮಿನಲ್ಲಿ, ಇದು ವರೆಗೂ, ಒಟ್ಟು 1 ಲಕ್ಷ 78 ಸಾವಿರದ 568 ಹೆಕ್ಟರ್ ಪ್ರದೇಶದಲ್ಲಿ, ಬಿತ್ತನೆಯಾಗಿದೆ ಎಂದು, ಕೃಷಿ ಇಲಾಖೆ ಜಂಟಿ ನಿರ್ದೇಶಕರು ತಿಳಿಸಿದ್ದಾರೆ. ಹಿಂಗಾರು ಬೆಳೆಗಳಾದ ಕಡಲೆ, ಗೋದಿ, ಗೋವಿನಜೋಳ, ಜೋಳಗಳಲ್ಲಿ ಕೀಟ ಬಾಧೆ ಸಾಧ್ಯತೆಯಿದ್ದು, ರೈತರು ಮುಂಜಾಗ್ರತಾ ಕ್ರಮ ಕೈಗೊಳ್ಳಲು, ಮನವಿ ಮಾಡಿದ್ದಾರೆ.

<><><>

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯನ್ನು, ಪರಿಣಾಮಕಾರಿಯಾಗಿ ಜಾರಿ ಮಾಡಿ, ಕರ್ನಾಟಕ ರಾಜ್ಯ, ದೇಶಕ್ಕೆ ಮೊದಲನೇ ಸ್ಥಾನದಲ್ಲಿದೆ ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಹೇಳಿದ್ದಾರೆ. 69 ಸಾವಿರದ 922 ಅಂಗನವಾಡಿ ಕೇಂದ್ರಗಳಿಂದ, 40 ಲಕ್ಷಕ್ಕೂ ಹೆಚ್ಚು ಮಹಿಳೆಯರು ಹಾಗೂ ಮಕ್ಕಳಿಗೆ ಅನುಕೂಲವಾಗಿದೆ ಎಂದರು. ಕೇಂದ್ರದ 2 ಸಾವಿರದ 700 ರೂಪಾಯಿ ಅನುದಾನದೊಂದಿಗೆ, ರಾಜ್ಯ ಸರ್ಕಾರ, 8 ಸಾವಿರದ 500 ರೂಪಾಯಿ ಸಹಾಯಧನ ನೀಡಿ, ಅಂಗನವಾಡಿ ಸಹಾಯಕಿಯರಿಗೆ ಹೆಚ್ಚಿನ ಗೌರವ ಧನವನ್ನು ನೀಡುತ್ತಿರುವ ರಾಜ್ಯಸಹ ಕರ್ನಾಟಕ ಎಂದರು.

<><><>

ಅಖಿಲ ಭಾರತ, ವೀರಶೈವ ಮಹಾಸಭೆ ರಾಜ್ಯ ಘಟಕ ಪ್ರಸ್ತುತ ಪಡಿಸುವ, 'ಆನ್‌ಲೈನ್ ಅನುಭವ ಮಂಟಪ' ಜಾಲತಾಣಕ್ಕೆ, ತುಮಕೂರಿನ, ಶ್ರೀ ಸಿದ್ಧಗಂಗಾ ಮಠದ, ಶ್ರೀ ಶಿವಸಿದ್ಧೇಶ್ವರ ಸ್ವಾಮೀಜಿ, ಚಾಲನೆ ನೀಡಿದರು.

<><><>

ಕೊಡಗಿನ ಸಂಸ್ಕೃತಿಯನ್ನು ಮೈವೆತ್ತ, 'ಐನ್ ಮನೆಗಳು' ಹಾಗೂ ಮಡಿಕೇರಿ ಕೋಟೆ ಸೇರಿದಂತೆ, ಪುರಾತನ ಮಂದ್‌ನ ರಕ್ಷಣೆಗೆ, ಕ್ರಮ ವಹಿಸುವುದಾಗಿ, ಮೈಸೂರು–ಕೊಡಗು ಕ್ಷೇತ್ರದ ಸಂಸದ, ಯದುವೀರ ಕೃ ್ಣದತ್ತ ಚಾಮರಾಜ ಒಡೆಯರ ತಿಳಿಸಿದ್ದಾರೆ. ಮಡಿಕೇರಿ ಜಿಲ್ಲಾ ಕ್ರೀಡಾಂಗಣದ ಬಳಿ, ಕೊಡವ ಸಮಾಜದ ಮಂದ್‌ನಲ್ಲಿ, ಅರಳಿ ಗಿಡ ನೆಟ್ಟು ಮಾತನಾಡಿದರು. ವಿರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ, ಮಡಿಕೇರಿ ಶಾಸಕ ಮಂಥರ್ ಗೌಡ ಪಾಲ್ಗೊಂಡಿದ್ದರು.

<><><>

ಧಾರವಾಡದ ಮಕ್ಕಳ ಅಕಾದೆಮಿ, ಕರ್ನಾಟಕ ಬಾಲ ವಿಕಾಸ ಅಕಾದೆಮಿ ಸಹಯೋಗದಲ್ಲಿ, ಕರ್ನಾಟಕ ಬಾಲ ವಿಕಾಸ ಭವನದಲ್ಲಿ, ಡಿಸೆಂಬರ್ 3 ರಂದು, ಪೂರ್ವ ಪ್ರಾಥಮಿಕ ಶಾಲೆಯ ಚಿಣ್ಣರಿಗಾಗಿ, ಮಕ್ಕಳೋತ್ಸವ ಆಯೋಜಿಸಿದೆ. ಮಕ್ಕಳ ಹೆಸರುಗಳನ್ನು ಪಾಲಕರು, ವಿವಿಧ ಪ್ರತಿಭಾ ಪ್ರದರ್ಶನ ಸಾಂಸ್ಕೃತಿಕ ಸ್ಪರ್ಧೆಗಳಿಗಾಗಿ, ಹೆಸರು ನೋಂದಾಯಿಸಲು, ನಾಡಿದ್ದು ಡಿಸೆಂಬರ್ 1, ಸೋಮವಾರ ಕೊನೆಯ ದಿನವಾಗಿದೆ ಎಂದು, ಮಕ್ಕಳ ಅಕಾದೆಮಿ ವಿಶ್ವಸ್ಥ, ಎಂ.ವೈ. ಸಾವಂತ ತಿಳಿಸಿದ್ದಾರೆ.

<><><>

ಧಾರವಾಡದ, ಆಲೂರ ವೆಂಕಟರಾವ ಸಭಾಭವನದಲ್ಲಿ ಆಯೋಜಿಸಿದ್ದ, ಹಿರಿಯ ಸಂಶೋಧಕ, ದಿವಂಗತ ಎಂ.ಎಂ. ಕಲಬುರ್ಗಿ ಅವರ, 87ನೇ ಜನ್ಮದಿನದ ಕಾರ್ಯಕ್ರಮದಲ್ಲಿ, ಹಿರಿಯ ಸಂಶೋಧಕ ಬಿ.ವಿ. ಶಿರೂರ ಅವರಿಗೆ, ಎಂ.ಎಂ. ಕಲಬುರಗಿ ರಾಷ್ಟ್ರೀಯ ಪ್ರತಿಷ್ಟಾಣದ, ಸಂಶೋಧನಾ ಪುರಸ್ಕಾರ ಹಾಗೂ ವಚನ ಸಂಗೀತ ಪ್ರಶಸ್ತಿಯನ್ನು, ಗಾಯಕಿ ಸುಜಾತಾ ಗುರವ ಕಮ್ಮಾರ ಅವರಿಗೆ, ನಾಡೋಜ ಹಂ.ಪ. ನಾಗರಾಜಯ್ಯ ನೀಡಿ, ಗೌರವಿಸಿದರು.

<><><>

ಮುಂಬರುವ ಮೂರು ದಿನಗಳಲ್ಲಿ, ಅಧಿಕಾರ ಹಂಚಿಕೆಯ ಬಣ ಕಿತ್ತಾಟ, ರಾಜ್ಯದ ಕಾಂಗ್ರೆಸ್ ಸರ್ಕಾರ ಕೊನೆಗೊಳಿಸಿ, ಸುಭದ್ರ ಆಡಳಿತದೆಡೆ ಹೆಜ್ಜೆ ಇಡದಿದ್ದರೆ, ರಾಜ್ಯದ ಹಿತದೃಷ್ಟಿಯಿಂದ, ರಾಷ್ಟ್ರಪತಿ ಆಳ್ವಿಕೆಗೆ ತಾವು ಒತ್ತಾಯಿಸುವುದಾಗಿ, ಬೆಳಗಾವಿ ಸಂಸದ ಜಗದೀಶ ಶೆಟ್ಟರ್, ತಿಳಿಸಿದ್ದಾರೆ.

<><><>

ಆಕಾಶವಾಣಿಯ, ಬಹುಶ್ರುತ, 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿ, ನಾಳೆ ಭಾನುವಾರ, ಬೆಳಗ್ಗೆ 11 ಗಂಟೆಗೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ದೇಶ–ವಿದೇಶಗಳ ಭಾರತೀಯರನ್ನುದ್ದೇಶಿಸಿ, ಮಾತನಾಡಲಿದ್ದಾರೆ. 'ಮನದ ಮಾತು', ಬಾನುಲಿ ಭಾಷಣದ, 128ನೇ ಆವೃತ್ತಿಯಾಗಿದೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಮಧ್ಯಾಹ್ನ 1 ಗಂಟೆ 10 ನಿಮಿಷಕ್ಕೆ.